C.S.(M)2013

**A-BRL-M-LBOC**

# KANNADA

**( COMPULSORY )**

*Time allowed : **Three** Hours*

*Maximum Marks : **300***

---

**Question Paper Specific Instructions**

***Please read each of the following instructions carefully before attempting questions :***

*All questions are to be attempted.*

*The number of marks carried by a question is indicated against it.*

*Answers must be written in **KANNADA** unless otherwise directed in the question.*

*Word limit in questions, wherever specified, should be adhered to and if answered in much longer or shorter than the prescribed length, marks will be deducted.*

*Any page or portion of the page left blank in the answer book must be clearly struck off.*

---

**Q1.** ಈ ಕೆಳಗಿನವುಗಳಿಗೆ ಪ್ರತಿಯೊಂದರ 300 ಪದಗಳಿಗೆ ಮೀರದಂತೆ ಸಂಕ್ಷಿಪ್ತ ಪ್ರಬಂಧಗಳನ್ನು ಬರೆಯಿರಿ : *50×2=100*

(ಅ) ನಾವು ಮಾಡುವ ಕಾರ್ಯಗಳಿಂದ ಬದುಕುತ್ತೇವೆ ವರ್ಷಗಳಿಂದಲ್ಲ. *50*

(ಆ) ಸಕಾಲಕ್ಕೆ ಸಿಗಬೇಕಾದ ನ್ಯಾಯ ಸಿಗದಿದ್ದರೆ ಯಾವ ಸಮಾಜವೂ ತಾಳಿಕೊಳ್ಳಲಾರದು. *50*

**Q2.** ಕೆಳಗೆ ನೀಡಿರುವ ಗದ್ಯಭಾಗವನ್ನು ಓದಿ ಕೊನೆಯಲ್ಲಿ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ. ನಿಮ್ಮ ಉತ್ತರಗಳು ನೇರ, ಸ್ಪಷ್ಟ ಮತ್ತು ಸಂಕ್ಷಿಪ್ತವಾಗಿರಲಿ : *10×6=60*

ಪತ್ರಕರ್ತರಲ್ಲಿರುವ ಭಿನ್ನಾಭಿಪ್ರಾಯವು ಆಡಳಿತಗಾರರಿಗೆ ಅನುಕೂಲಕರವಾಗಿ ಪರಿಣಮಿಸುತ್ತದೆ. ಪತ್ರಿಕಾ ಮಾಧ್ಯಮದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಸಮಸ್ಯೆಯ ಬಹುಧ್ವನಿತ್ವವನ್ನು ವ್ಯಕ್ತಪಡಿಸುತ್ತದೆ ಅದು ದೊಡ್ಡಧ್ವನಿಯಾಗದೆ ಹೋಗಬಹುದು. ಆದನ್ನು ಓದುವವರ

ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಪತ್ರಿಕಾಮಾಧ್ಯಮದ ಪ್ರಭಾವ ಬಹುಮುಖವಾದದ್ದು. ಪತ್ರಿಕೆಯ ಶಕ್ತಿ ಜನಾಭಿಪ್ರಾಯವನ್ನು ರೂಪಿಸುವದರಲ್ಲಿರುತ್ತದೆಯೇ ಹೊರತು ಮಾರಾಟದಿಂದ ಹಣಸಂಪಾದನೆ ಮಾಡುವದಾಗಲೀ ಅಥವಾ ಪ್ರಸಾರ ಸಂಖ್ಯೆಯನ್ನು ಬೆಳೆಸುವದಲ್ಲವಾಗಿರುತ್ತದೆ.

ಪ್ರಸಾರ ಸಂಖ್ಯೆಯು ಪತ್ರಿಕೆಯ ಜನಪ್ರಿಯತೆಯ ಸಂಕೇತವಾಗಿರುತ್ತದೆ. ಪ್ರತಿಯೊಂದು ಪತ್ರಿಕೆಯ ಗುಣದೋಷಗಳನ್ನು ಶಕ್ತಿಮಿತಿಗಳನ್ನು ಅದನ್ನೋದುವ ಜನತೆ ತಿಳಿದಿರುತ್ತದೆ. ಚಲನಚಿತ್ರ ಮಾಧ್ಯಮದ ಯಶಸ್ಸು ಅದರ ಬಾಕ್ಸ ಆಫೀಸಿನಲ್ಲಿ ಗೊತ್ತಾಗುವಂತೆ ಅದರ ಪ್ರಭಾವ ಇರುತ್ತದೆ. ಚಲನಚಿತ್ರ ಯಾವಾಗಲೂ ನಾಯಕ ಪ್ರಧಾನವಾಗಿಯೇ ತನ್ನ ಪ್ರದರ್ಶಕಮೌಲ್ಯವನ್ನು ಪಡೆದಿರುತ್ತದೆ. ಚಲನಚಿತ್ರದ ಜನಪ್ರಿಯತೆ ಅದರ ಕಲಾತ್ಮಕ ಗುಣಮೌಲ್ಯದಲ್ಲಿದೆ. ಜನಜಂಗುಳಿಯ ಆಕರ್ಷಣೆಯೊಂದೇ ಚಲನಚಿತ್ರದ ಮಾನದಂಡವಾಗುವದಿಲ್ಲ. ಯಾವಾಗಲೂ ಕಲಾಮೌಲ್ಯವನ್ನು ಆಸ್ವಾದಿಸುವವರ ಸಂಖ್ಯೆ ಕಡಿಮೆಯೇ ಆಗಿರುತ್ತದೆ. ಕಲಾಮೌಲ್ಯವನ್ನು ಗುರುತಿಸುವವರು ಅದರ ಜನಪ್ರಿಯ ಮಸಾಲೆಗೆ ಲಕ್ಷ್ಯ ವಹಿಸುವದಿಲ್ಲ. ಜನರಲ್ಲಿ ಅಕ್ಷರ ಜಾಗೃತಿಯುಂಟಾದರೆ ಶೈಕ್ಷಣಿಕ ಮುನ್ನಡೆ ಮತ್ತು ಮುದ್ರಣಮಾಧ್ಯಮದ ಬೆಳವಣಿಗೆಗೆ ಕಾರಣವಾಗುತ್ತದೆ. ಎರಡರಲ್ಲೂ ಪರಿಶ್ರಮವಿದ್ದೇಇದೆ. ಆದರೆ ಎದುರಾಗುವ ಪ್ರಲೋಭನೆಗಳನ್ನು ದಾಟಿ ಮುನ್ನಡೆಯಬೇಕು.

**ಪ್ರಶ್ನೆಗಳು :**

(i) ಲೇಖಕರು ಯಾವ ಎರಡು ಮಾಧ್ಯಮಗಳ ಬಗೆಗೆ ಹೇಳುತ್ತಿದ್ದಾರೆ ? *10*

(ii) ಜನರು ಪತ್ರಿಕೆಯನ್ನು ಯಾವ ಕಾರಣಕ್ಕಾಗಿ ಸ್ವೀಕರಿಸುತ್ತಾರೆ ? *10*

(iii) ಲೇಖಕರು ಯಾವುದಕ್ಕೆ ಒತ್ತುಕೊಟ್ಟು ಹೇಳುತ್ತಿದ್ದಾರೆ ? *10*

(iv) ಪತ್ರಿಕಾ ಮಾಧ್ಯಮ ಹೇಗಿರಬೇಕೆಂದು ಲೇಖಕರು ಬಯಸುತ್ತಾರೆ ? *10*

(v) ಲೇಖಕರು ಯಾವುದನ್ನು ಮಾನ್ಯಮಾಡುವದಿಲ್ಲ? *10*

(vi) ಪತ್ರಿಕೆಯ ಗುಣಮಟ್ಟ ಕೆಡದಂತೆ ಮಾಡುವದು ಹೇಗೆ ? *10*

**Q3.** **ಕೆಳಗಿನ ವಾಕ್ಯವೃಂದವನ್ನು ಅದರ ಮೂರನೇ ಒಂದು ಭಾಗಕ್ಕೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಇದರ ಶೀರ್ಷಿಕೆಯನ್ನು ಸೂಚಿಸುವ ಅವಶ್ಯಕತೆಯಿಲ್ಲ. ಆದರೆ ಸಂಕ್ಷಿಪ್ತ ಬರಹದ ನಿಗದಿಯಾದ ಪದಗಳ ಮಿತಿಗಿಂತ ಚಿಕ್ಕದಾಗಿದ್ದರೆ ಅಥವಾ ದೊಡ್ಡದಾಗಿದ್ದರೆ ಅಂಕಗಳನ್ನು ಕಳೆಯಲಾಗುವದು.** *60*

ಸಮಕಾಲೀನ ಪ್ರಪಂಚದಲ್ಲಿ 'ರಾಷ್ಟ್ರ ಮತ್ತು 'ರಾಷ್ಟ್ರರಾಜ್ಯ' ಗಳ ಬಗೆಗೆ ಬಹಳಷ್ಟು ತಪ್ಪುಗ್ರಹಿಕೆಗಳು ಮನೆಮಾಡಿವೆ. 'ರಾಷ್ಟ್ರರಾಜ್ಯ' ವನ್ನು ಸಾಪೇಕ್ಷವಾಗಿ ಸುಲಭವಾಗಿ ವ್ಯಾಖ್ಯಾನಿಸಬಹುದು. ಅವು ರಾಜಕೀಯ ವ್ಯವಸ್ಥೆಯ ಮೂಲಭೂತ ಅಂಗಗಳೇ ಆಗಿವೆ. ಅವು ಸಾರ್ವಭೌಮ ರಾಜ್ಯವನ್ನು ಪ್ರತಿನಿಧಿಸುತ್ತವೆ. ಅವು ಸಂಯುಕ್ತಗಣರಾಜ್ಯದಲ್ಲಿ ಸ್ಥಾನಪಡೆದಿವೆ. ಸಾಮಾನ್ಯವಾಗಿ ಆಂಗ್ಲಭಾಷೆಯಲ್ಲಿ ಅವು 'ಕಂಟ್ರೀಸ್' ಎಂದೇ ಕರೆಯಲ್ಪಡುತ್ತವೆ. ನಮ್ಮ ಅನುಕೂಲಕ್ಕಾಗಿ ಅವುಗಳನ್ನು 'ರಾಜ್ಯ' ಎಂದು ಕರೆಯುತ್ತೇವೆ. ಆದರೆ ಇದು ಕೆಲವು 'ರಾಷ್ಟ್ರರಾಜ್ಯ' ವೆಂದೂ ಚಿಕ್ಕದಾದ 'ರಾಜ್ಯ' ಗಳೆಂದೂ ಕರೆಯಲ್ಪಡುತ್ತವೆ.

'ರಾಷ್ಟ್ರರಾಜ್ಯ' ಮತ್ತು 'ಸಾರ್ವಭೌಮೌತ್ವರಾಜ್ಯ' ಇವುಗಳನ್ನು ಒಂದೇ ಎಂದು ಪರಿಗಣಿಸಲಾಗದು. ಇದು ನಮ್ಮಲ್ಲಿ ತಪ್ಪು ಗ್ರಹಿಕೆಗೆ ಕಾರಣವಾಗುತ್ತದೆ. ಯಾಕೆಂದರೆ ಆಧುನಿಕ ಜಗತ್ತಿನಲ್ಲಿ ಸಾರ್ವಭೌಮತೆಗೆ ವಿಶೇಷ ಮಹತ್ವವಿದೆ. ವಾಸ್ತವಿಕವಾಗಿ ಎಲ್ಲ 'ರಾಷ್ಟ್ರರಾಜ್ಯ' ಗಳೂ ಅಂತರಾಷ್ಟ್ರೀಯ ಸಂಘಗಳಲ್ಲಿ ಸೇರಿಕೊಂಡು ತಮ್ಮ ಸಾರ್ವಭೌಮತ್ವವನ್ನು ಕಳೆದುಕೊಂಡಿವೆ ಇಂಥ ಅಂತರಾಷ್ಟ್ರೀಯ ಸಂಘಗಳಲ್ಲಿ ಸಂಯುಕ್ತರಾಷ್ಟ್ರ ಸಂಘ ಒಂದು ಉತ್ತಮ ನಿದರ್ಶನವಾಗಿದೆ. ಅದರಲ್ಲಿ ಪ್ರಪಂಚದ ಪ್ರತಿಯೊಂದು ರಾಷ್ಟ್ರರಾಜ್ಯವೂ ವಿಲೀನವಾಗಿದೆ. ಇದು ಒಂದರ್ಥದಲ್ಲಿ ದೊಡ್ಡರಾಜ್ಯದ ಶಕ್ತಿಯನ್ನು ಸೂಚಿಸುತ್ತದೆ. ಇನ್ನೊಂದರ್ಥದಲ್ಲಿ ಬಹಳಷ್ಟು ಶಕ್ತಿಶಾಲಿಯಾದ ರಾಷ್ಟ್ರಗಳಲ್ಲಿ – ಅಂತರಾಷ್ಟ್ರೀಯ ಸಂಘಗಳಲ್ಲಿ ವಿಲೀನವಾಗುತ್ತವೆ. ನಿಜವಾಗಿಯೂ ಅನೇಕ ವಿಷಯಗಳಲ್ಲಿ ಸ್ವತಂತ್ರವಾದ ನಿರ್ಧಾರ ಕೈಕೊಳ್ಳುವ ಸಾಮರ್ಥ್ಯ ಅವುಗಳಿಗಿರುವದಿಲ್ಲ.

ಬಹಳಷ್ಟು ರಾಷ್ಟ್ರ-ರಾಜ್ಯಗಳು ತಮ್ಮನ್ನು 'ರಾಷ್ಟ್ರಗಳು' ಎಂದೇ ವರ್ಣಿಸಿಕೊಳ್ಳುತ್ತವೆ. ಹಾಗಿದ್ದರೆ 'ರಾಷ್ಟ್ರರಾಜ್ಯ' ಮತ್ತು 'ರಾಜ್ಯ' ಗಳನ್ನು ಒಂದೇ ವಿಧವಾದ ಅರ್ಥದಲ್ಲಿ ಯಾಕೆ ತೆಗೆದುಕೊಳ್ಳಬಾರದು ? ಆದರೆ ಇದು ಸಾಧ್ಯವಿಲ್ಲ, ಯಾಕೆಂದರೆ ಅವು ಬೇರೆ ಬೇರೆ ರೀತಿಯಲ್ಲಿವೆ. ರಾಷ್ಟ್ರರಾಜ್ಯವನ್ನು ತಾತ್ವಿಕ ನೆಲೆಯಲ್ಲಿ ಗ್ರಹಿಸಬೇಕು. ರಾಷ್ಟ್ರವು ತನ್ನದೇ ಆದ ಜನಸಮುದಾಯವನ್ನೊಳಗೊಂಡಿದೆ. ಆಧುನಿಕ ಜನಸಮುದಾಯಗಳು ತಮ್ಮನ್ನು ತಾವೇ ಒಂದು ರಾಷ್ಟ್ರ ಎಂದು ಭಾವಿಸುತ್ತವೆ. ಆದರೆ ರಾಷ್ಟ್ರರಾಜ್ಯಗಳು ಇದರಲ್ಲಿ ಸೇರಿರುತ್ತವೆ.

ಬಹಳಷ್ಟು ವ್ಯಾಖ್ಯಾನಕಾರರು ಹೇಳುವದೇನೆಂದರೆ ಬಹುಸಂಖ್ಯಾತ ಜನಸಮುದಾಯಗಳು 'ಸೋವಿಯತ್ ಯೂನಿಯನ್' ಸಂಯುಕ್ತ ಗಣರಾಜ್ಯದಲ್ಲಿ ಸೇರಿಕೊಂಡಿವೆ. ಇದೇರೀತಿ ಜಾರ್ಜಿಯನ್ನರು, ಲಿಥ್ಯುವೇನಿಯನ್‌ರು ಮತ್ತು ಉಕ್ರೇನ್ ದವರು ಸ್ವತಂತ್ರರಾಗುವದಕ್ಕೆ ಮೊದಲೇ ರಾಷ್ಟ್ರೀಕರಾಗಿದ್ದರು. ಅದೇ ರೀತಿ ಸ್ಕಾಟಲ್ಯಾಂಡ್‌ದ ಬಹುಸಂಖ್ಯಾತರು ರಾಷ್ಟ್ರಿಕರೇ ಆಗಿದ್ದರು. ಇದನ್ನೇ ಬೇರೊಂದು ರೀತಿಯಲ್ಲಿ ಹೇಳುವದಾದರೆ ಅವರಿಗೆ ಬೇಕಾದ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವ ಮುಖ್ಯವಾಗಿತ್ತು. ಹೀಗಿದ್ದರೂ ರಾಜಕೀಯವಾಗಿ ಮೇಲ್ನೋಟಕ್ಕೆ ಆಧುನಿಕ ರಾಷ್ಟ್ರ-ರಾಜ್ಯಗಳು ತುಂಬಾ ಹಳೆಯವು. ಸಹಸ್ರಾರು ವರ್ಷಗಳ ಹಿಂದೆ ಪ್ರಪಂಚದ ಕೆಲವು ಭಾಗಗಳಲ್ಲಿ ನಿದರ್ಶನಕ್ಕೆ ಚೀನಾ, ಭಾರತ ಮತ್ತು ಮೆಡಿಟರೇನಿಯನ್ ತೀರದಲ್ಲಿ ಈ ಹಳೆಯ ಸಂಘಗಳು ಮೂಲದಲ್ಲಿದ್ದು ಕೇವಲ ಗಡಿಗಳಲ್ಲಿ ಮಾತ್ರ ಅವು ಬೇರೆಯಾಗಿದ್ದವು. ಹಳೆಯಕಾಲದ ಈ ರಾಜಕೀಯ ವ್ಯವಸ್ಥೆ ಅಭಿವೃದ್ಧಿ ಹೊಂದಿದೆ ಅಥವಾ ಬೇರೊಂದು ರೀತಿಯಲ್ಲಿ ಅದು ಆಧುನಿಕ 'ರಾಷ್ಟ್ರ-ರಾಜ್ಯ' ವಾಗಿ ಸ್ಥಳಾಂತರಗೊಂಡಿದೆ. ಕ್ರಮೇಣ ಸಾವಕಾಶವಾಗಿ ಅವುಗಳ ಅಸ್ತಿತ್ವ ಆಧುನಿಕ ಸಂದರ್ಭದಲ್ಲಿ ಗೋಚರಿಸತೊಡಗಿದೆ. ಆಸ್ಟ್ರೋ-ಹಂಗೇರಿಯನ್, ರಶಿಯನ್, ಮತ್ತು ಅಟ್ಟೊಮನ್ ರಾಜ್ಯಗಳು 1917 ಮತ್ತು 1918 ವರೆಗೆ ಅಸ್ತಿತ್ವದಲ್ಲಿದ್ದವು. ಅವು ರಾಜಮನೆತನದ ಆಡಳಿತವಾಗಿದ್ದವು. ಅವುಗಳಿಗೆ ಸಾಮಾನ್ಯವಾದ ರಾಷ್ಟ್ರೀಯ ಅಸ್ತಿತ್ವ ಇರಲಿಲ್ಲ.

'ಸೋವಿಯತ್ ಯೂನಿಯನ್' ಕೂಡ ರಶಿಯನ್ ಸಾಮ್ರಾಜ್ಯ ಇರುವವರೆಗೆ ಅಂದರೆ 1991 ರವರೆಗೆ ಇದನ್ನೇ ಮುಂದುವರಿಸಿತ್ತು. ಸಂವಿಧಾನಾತ್ಮಕವಾಗಿ ರಾಜ್ಯವು ಹಲವು ರಾಷ್ಟ್ರಗಳ ಸಮೂಹವೇ ಆಗಿತ್ತು. ಇಂದಿಗೂ 'ರಾಷ್ಟ್ರರಾಜ್ಯ' ಮತ್ತು 'ರಾಷ್ಟ್ರಗಳು' ಸುಲಭವಾಗಿ ಒಂದಾಗಿ ಇರುವದಿಲ್ಲ. ಆದರೂ ಕೂಡ ಸರಕಾರಗಳು ಎಲ್ಲ ರಾಷ್ಟ್ರ-ರಾಜ್ಯಗಳನ್ನು ಅವುಗಳ ರಾಜ್ಯಾಡಳಿತದ ರಾಷ್ಟ್ರಗಳೆಂದೇ ಹೇಳುತ್ತವೆ. ಅನೇಕ ರಾಜ್ಯಗಳು ಜನಸಮುದಾಯಗಳು ರಾಷ್ಟ್ರೀಯತೆಯನ್ನು ಒಪ್ಪಿಕೊಳ್ಳಲಾರವು. ಬ್ರಿಟನ್‌ದಲ್ಲಿರುವ ಬಹಳಷ್ಟು ಸ್ಕಾಟ್ ಮತ್ತು ವೆಲ್ಷಿ ಜನರು ತಾವು ಇನ್ನೂ ಸ್ಕಾಟ ಮತ್ತು ವೆಲ್ಷರೆಂದೇ ಭಾವಿಸುತ್ತಾರೆ. ಅವರು ಬ್ರಿಟಿಶ್ ರಾಷ್ಟ್ರದ ಪ್ರಜೆಗಳೆಂಬ ಭಾವನೆ ಅವರಲ್ಲಿ ಬಂದಿಲ್ಲ. ಇದರಿಂದ ಅವರು ಸ್ಕಾಟ್-ಬ್ರಿಟೀಶರೆಂದೂ - ವೆಲ್ಷಬ್ರಿಟೀಶರೆಂದೂ ರಾಷ್ಟ್ರೀಯತೆಯ ಸಂದರ್ಭದಲ್ಲಿ ಗುರುತಿಸಲ್ಪಡುತ್ತಾರೆ. ಇನ್ನು ಅರಬ್ ರಾಷ್ಟ್ರಗಳಲ್ಲಿರುವವರು ಬಹಳಷ್ಟು ಜನರು ತಾವು ಅರಬ್ ಗಣರಾಜ್ಯಕ್ಕೆ ಸೇರಿದವರೆಂದು ಭಾವಿಸದೆ ಇರಾಕ್ ದಿಂದ, ಮೊರಾಕ್ ಮತ್ತು ದಕ್ಷಿಣ ಯಮನ್ ದಿಂದ ಬಂದವರೆಂಬ ಭಾವನೆಯನ್ನು ಹೊಂದಿದ್ದಾರೆ.

ಅನೇಕ ಜನರಲ್ಲಿ ಜನಾಂಗಿಕ ಮೂಲದ ಗ್ರಹಿಕೆ ಇರುವದರಿಂದ ಅದು ರಾಷ್ಟ್ರದ ವಿಶಾಲವಾದ ಅರ್ಥಕ್ಕೆ ಭಂಗ ತರುತ್ತದೆ. ಅದಕ್ಕಾಗಿಯೇ ರಾಷ್ಟ್ರೀಯ ಏಕತೆಗೆ ರಾಜ್ಯಗಳ ಕಲ್ಪನೆ ಮಾರಕವಾಗಿದೆ. ಆದ್ದರಿಂದ ನಾವು ಮೊದಲು ಅಮೇರಿಕನ್ ಆನಂತರ ಆಫ್ರಿಕನ್ ಜನಾಂಗಕ್ಕೆ ಸೇರಿದವನು ಎಂದು ತಿಳಿಯುವದು ಆವಶ್ಯಕ. ಏನೇ ಇದ್ದರೂ ರಾಷ್ಟ್ರ-ರಾಜ್ಯಗಳು ಮತ್ತು ರಾಷ್ಟ್ರಗಳು ಒಂದೇ ಆಗಲಾರವು. ನಿಜ ಹೇಳಬೇಕೆಂದರೆ ಅವು ಒಂದರೊಡನೊಂದು ಬೆರೆತಿವೆ, ತೀರ ಹತ್ತಿರದ ಸಂಬಂಧ ಹೊಂದಿವೆ. ಅಂಥೊನಿ ಸ್ಮಿತ್ ಅವರು (ನೋಡಿ ಸ್ಮಿಥೆ 1991) ರಾಷ್ಟ್ರವನ್ನು ಎರಡು ರೀತಿಯಲ್ಲಿ ವಿಂಗಡಿಸುತ್ತಾರೆ. ಅವು ಯಾವವೆಂದರೆ ಜನಾಂಗಿಕ ಗುಂಪುಗಳಿಂದ ಅಭಿವೃದ್ಧಿ ಹೊಂದಿರುವಂಥವು ಮತ್ತು ಜನಾಂಗಿಕ ಗ್ರಹಿಕೆಯಿಂದ ಹೊರಬಂದ ಬಹುಸಂಖ್ಯಾತ ಜನಸಮುದಾಯಗಳು ಮತ್ತು ಅದರಿಂದ 'ರಾಷ್ಟ್ರೀಯತೆ' ಯ ಕಲ್ಪನೆ ಅವರಲ್ಲಿ ಮೊಳೆಯುವಂತಾದದ್ದು ಅದರಿಂದ ಹಳೆಯ ಜನಾಂಗಿಕ ಭಾವನೆ ಮೂಡದೇ ಇರುವಂಥಹದ್ದು ಎಂದು ಹೇಳಬಹುದು. (424 ಶಬ್ದ)

**Q4. ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಅನುವಾದಿಸಿರಿ :** ***20***

Raman completed school when he was just eleven years old and spent two years studying in his father's college. When he was only thirteen years old, he went to Madras (which is now Chennai), to join the B.A. course at Presidency College. Besides being young for his class, Raman was also quite unimpressive in appearance and recalls, '... in the first English class that I attended, Professor E.H. Elliot addressing me, asked if I really belonged to the junior B.A. class, and I had to answer him in the affirmative.' He, however, stunned all the sceptics when he stood first in the B.A. examinations.

Seeing what a brilliant student he was, his teachers asked him to prepare for the Indian Civil Services (ICS) examination. It was a very prestigious examination and very rarely did non-Britishers get through it. Yet Raman had impressed his teachers so much that they urged him to take it up at such an early age. In spite of their student's brilliance, the plan was not to work. Raman had to undergo a medical examination before he could qualify to take the ICS test and the Civil Surgeon of Madras declared him medically unfit to travel to England ! This was the only examination that Raman failed, and he would later remark in his characteristic style about the man who disqualified him, 'I shall ever be grateful to this man,' but at that time, he simply put the attempt behind him and went on to study Physics.

**Q5. ಕೆಳಗಿನ ಗದ್ಯಭಾಗವನ್ನು ಇಂಗ್ಲೀಷಿಗೆ ಅನುವಾದ ಮಾಡಿ : 20**

ಹಣವನ್ನು ಹೀಗೆ ವ್ಯಾಖ್ಯಾನಿಸಬಹುದು. ಖರೀದಿಸುವದಕ್ಕಾಗಿ ಒಂದು ಕೈಯಿಂದ ಇನ್ನೊಂದು ಕೈಗೆ ಏನನ್ನಾದರೂ ಸಿದ್ಧವಾದದ್ದನ್ನು ಕೊಡುವದು. ಅದರ ಉಪಯೋಗವು ಕೊಡುವದರ ಪ್ರತೀಕವಾಗಿರುತ್ತದೆಯಾದರೂ ಯಾವುದೇ ವಸ್ತುವಿನ ಮೌಲ್ಯವನ್ನು ಸಮತೋಲನಗೊಳಿಸಿ ಎರಡೂ ಕಡೆಯಿಂದ ಒಪ್ಪಿಗೆ ಪಡೆದುಕೊಂಡು ಕೊಟ್ಟಿರುವದೇ ಆಗಿರುತ್ತದೆ. ಹೀಗೆ ಪರಸ್ಪರ ಕೊಡುಕೊಳ್ಳುವಿಕೆಯಿಂದ ಹಣವು ಕಾರ್ಯವಿಭಾಗ, ಮತ್ತು ದೊಡ್ಡ ಪ್ರಮಾಣದ ಉತ್ಪಾದನೆಗೆ ನೆರವು ನೀಡುತ್ತದೆ. ಹಣವು ಒಂದು ನಿಗದಿತ ಮೊತ್ತದ ರಾಶಿಯಾಗಿದ್ದು ಅಥವಾ ಯಾವುದೇ ಕಾನೂನಿನಿಂದ ಕೊಡಲ್ಪಟ್ಟಿದ್ದು ಆದರೆ ಅದರ ಪ್ರಮುಖ ಅತ್ಯಗತ್ಯವಾದ ಲಕ್ಷಣವೆಂದರೆ ಅದು ಎಲ್ಲರಿಂದ ಮಾನ್ಯತೆ ಪಡೆದ ಸುಲಭವಾಗಿ ಸಿಗುವ ವಸ್ತುವೇ ಆಗಿದೆ. ಪ್ರಾಚೀನ ಜನಾಂಗಗಳಲ್ಲಿ ಇದಕ್ಕೆ ಬದಲಾಗಿ ವಸ್ತುಗಳಾದ ಆಕಳು, ವಸ್ತ್ರಗಳು, ಅಕ್ಕಿ ಮತ್ತು ಚಹವನ್ನು ಉಪಯೋಗಿಸುತ್ತಿದ್ದರು. ಆದರೆ ಆಧುನಿಕ ನಾಗರಿಕ ಸಮಾಜ ಇವುಗಳನ್ನೆಲ್ಲ ಬಿಟ್ಟು ಖನಿಜ ಮತ್ತು ಕಾಗದಗಳನ್ನು ಬಳಸತೊಡಗಿದೆ. ಇವೇ ನಾಣ್ಯ ರೂಪವನ್ನೂ, ನೋಟನ್ನೂ ಹೊಂದಿದ್ದು, ಬಹಳಷ್ಟು ಜನರಿಗೆ ಅತ್ಯವಶ್ಯಕವಾದದ್ದು ಹಣ ಮತ್ತು ವಸ್ತುಗಳೇ ಆಗಿದ್ದು ಇವು ಸುಲಭವಾಗಿ ಸಾಗಿಸಬಲ್ಲಂಥವು ಮತ್ತು ಬಹುಕಾಲ ಉಳಿಯುವಂಥವು, ಸಮರೂಪದಿಂದ ಕೂಡಿದ ಲಕ್ಷಣಗಳನ್ನು ಹೊಂದಿದ್ದು ಅವು ಸ್ವೀಕಾರಾರ್ಹವಾಗಿವೆ.

ಖನಿಜಗಳಲ್ಲಿ ಬಂಗಾರವನ್ನು, ಬೆಳ್ಳಿಯನ್ನು, ತಾಮ್ರವನ್ನು, ತವರಿನಂಥ ನಿಕ್ಕೆಲ್ ಲೋಹವನ್ನು ಬಳಸಲ್ಪಡುತ್ತದೆ. ನೋಟುಗಳನ್ನು ಬೇರೆ ಬೇರೆ ರೂಪದಲ್ಲಿ ಬಳಸಲ್ಪಡುತ್ತದೆ. ಅದರ ಉಪಯೋಗವು ಪರಸ್ಪರ ಕೊಡುಕೊಳ್ಳುವಿಕೆಗಾಗಿ, ಇರುವದಲ್ಲದೆ ಹಣವು ವಸ್ತುವಿನ ಬೆಲೆಯ ಮೌಲ್ಯದ ಪ್ರತೀಕವಾಗಿ ನಿಗದಿತ ಸಂಬಳದ ಬಟವಡೆಗಾಗಿ, ಕೊಡಬೇಕಾದದ್ದನ್ನು ಕೊಡುವದಕ್ಕಾಗಿ ಮತ್ತು ಮೌಲ್ಯವನ್ನು ಕಾದಿರಿಸುವದಕ್ಕಾಗಿ ಇರುತ್ತದೆ. ಒಂದು ಮಹತ್ವದ ಲಕ್ಷಣವೆಂದರೆ ನಿಗದಿತವಾದ ಹಣ ಮತ್ತು ಚಿಹ್ನೆಯಿರುವ ಹಣ. ನಿಗದಿತವಾದ ಬೆಲೆಗೆ ಸರಿಸಮಾನವಾಗಿ ವಸ್ತುಗಳು ಮತ್ತು ಇತರ ಸಾಮಗ್ರಿಗಳನ್ನು ತೂಕ ಮತ್ತು ಅಳತೆಯ ಮಾನದಂಡದಲ್ಲಿ ಅಳೆಯಲಾಗುವದು. ಕ್ರಮಬದ್ಧವಾದ ನಿಗದಿತ ಹಣವು ವಸ್ತುವಿಗೆ ಸಂಬಂಧಿಸಿದಂತೆ ಇರುವದಾದರೂ ಚಿಹ್ನೆಯಿರುವ ನೋಟು ಅದರ ಮೌಲ್ಯವನ್ನು ನಿಯಮ ಅಥವಾ ಸಂಪ್ರದಾಯಕ್ಕೆ ಅನುಗುಣವಾಗಿ ಹೊಂದಿರುತ್ತದೆ.

**Q6. (ಅ) ಕೆಳಗಿನ ಪದಗಳನ್ನು ಉಪಯೋಗಿಸಿ ವಾಕ್ಯರಚನೆ ಮಾಡಿರಿ :** *1×10=10*

(i) ಪ್ರಾಮಾಣಿಕತೆ *1*

(ii) ನಿರರ್ಗಳ *1*

(iii) ಪರಿಮಳ *1*

(iv) ನಾಸ್ತಿಕ *1*

(v) ಸಂಶೋಧನೆ *1*

(vi) ಪರೋಪಕಾರ *1*

(vii) ಲಲಿತಕಲೆ *1*

(viii) ಸಹಾನುಭೂತಿ *1*

(ix) ಕಲಬೆರಕೆ *1*

(x) ಮತಭೇದ *1*

**(ಬ) ಕೆಳಗಿನ ಗಾದೆಮಾತುಗಳ ಅರ್ಥ ವಿವರಿಸಿರಿ :** *2×5=10*

(i) ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ *2*

(ii) ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ *2*

(iii) ಮಾತುಬಲ್ಲವ ಮಾಣಿಕತಂದ ಮಾತರಿಯದವ ಜಗಳತಂದ *2*

(iv) ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ *2*

(v) ಮನಸ್ಸಿದ್ದಲ್ಲಿ ಮಾರ್ಗವಿದೆ *2*

**(ಕ)** **ಕೆಳಗಿನವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ :** *1×10=10*

(i) ಸತ್ಯ *1*

(ii) ಪ್ರೀತಿ *1*

(iii) ಧೈರ್ಯ *1*

(iv) ವ್ಯವಸ್ಥೆ *1*

(v) ಶಾಂತಿ *1*

(vi) ಆನಂದ *1*

(vii) ಒಳ್ಳೆಯ *1*

(viii) ನೀತಿ *1*

(ix) ಪರ *1*

(x) ಮುಕ್ತಾಯ *1*

**(ಡ)** **ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಪದಗಳಿಂದ ಭರ್ತಿಮಾಡಿ :** *1×10=10*

(i) 'ಜಯಭಾರತ ಜನನಿಯ ತನುಜಾತೆ' ನಾಡಗೀತೆ ಬರೆದವರು __________ . *1*

(ii) ಬಸವಣ್ಣನವರ ವಚನಗಳ ಅಂಕಿತನಾಮ __________ . *1*

(iii) ಹತ್ತನೆಯ ಶತಮಾನದ ಕನ್ನಡ ರತ್ನತ್ರಯ ಕವಿಗಳು __________ . *1*

(iv) ಸಂತೋಷವೇ ಯೌವನ __________ ಮುಪ್ಪು. *1*

(v) ಮಂಕುತಿಮ್ಮನಕಗ್ಗ ಬರೆದವರು __________ . *1*

(vi) ನಾನು ಬಡವಿ ಆತ ಬಡವ ಒಲವೆನಮ್ಮಬದುಕು ಎಂದು ಹೇಳಿದವರು _____ . *1*

(vii) ಮನೆಯೆ ಮೊದಲ ಪಾಠಶಾಲೆ __________ ತಾನೆ ಮೊದಲ ಗುರುವು. *1*

(viii) 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಕವಿತೆ ಬರೆದವರು _______ . *1*

(ix) ಜಾತಿ ಹೀನನ ಮನೆಯ __________ ತಾ ಹೀನವೆ. *1*

(x) ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ ಕೈಹಿಡಿದು ನಡೆಸೆನ್ನನು ಬರೆದವರು __________ . *1*